ಆತನ ಮೀರಿಹೆ ನೀನಮ್ಮಾ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ!''

ಕುವೆಂಪು ಅವರ ಈ ಕವಿತೆ ಕಟ್ಟಿಕೊಳ್ಳುವ ಭಾಷಾಶರೀರವನ್ನು ಗಮನಿಸಿ. ಮಕ್ಕಳ ನುಡಿಸಂಪತ್ತನ್ನು ನಿರ್ಭಿಡೆಯಿಂದ ಹೆಚ್ಚಿಸುವಂತಿದೆ ಈ ಪದ್ಯ. ಪೆಪ್ಪರಮೆಂಟು ಎಂಬ ಅನ್ಯಭಾಷೆಯ ಪದವನ್ನು ಬಳಸಿಕೊಳ್ಳುವಲ್ಲಿ ಕವಿಗೆ ಮುಜುಗರವಿಲ್ಲ. ಯಾಕೆಂದರೆ ಪೆಪ್ಪರಮೆಂಟು ಈಗಾಗಲೇ ಕನ್ನಡವಾಗಿಬಿಟ್ಟಿದೆ ಎಂಬುದನ್ನು ಅವರು ಬಲ್ಲರು. ಕಾವ್ಯದಲ್ಲಿ ಆ ಪದವನ್ನು ಬಳಸುವ ಮೂಲಕ ಪದ್ಯಭಾಷೆ ದೊರಕಿಸುವ ಒಂದು ಮರ್ಯಾದಾಸೀಮೆ ಈಗ ಅದಕ್ಕೆ ಪ್ರಾಪ್ತವಾಗಿದೆ! ದಿನ ದಿನಕ್ಕೆ ಕರಗುವ ಚಂದ್ರನನ್ನು ದೇವರ ಪೆಪ್ಪರಮೆಂಟೆಂದು ಗ್ರಹಿಸುವಲ್ಲಿ ಮಕ್ಕಳ ಕಲ್ಪಕತೆಯನ್ನು ನಿರಾಯಾಸವಾಗಿ ಹಿಗ್ಗಿಸುವ ಚೋದ್ಯವಿದೆ. ಭಾಷೆ ಮತ್ತು ಕಲ್ಪಕತೆಗೆ ಜಿಗಿಯುವ ರೆಕ್ಕೆ ಹಚ್ಚದೆ ಅದು ಹೇಗೆ ಒಂದು ಮಕ್ಕಳ ಕವಿತೆ ಆದೀತು? ಅದು ಹೇಗೆ ತಾನೆ ಮಕ್ಕಳ ಕಲ್ಪನಾಶೀಲತೆಯನ್ನು ಹಿಗ್ಗಿಸಬಲ್ಲುದು? ಸಹಜ ಕವಿಯೊಬ್ಬ ಮಕ್ಕಳ ಕವಿತೆ ಬರೆದಾಗ ಮಾತ್ರ ಇಂತಹ ಅದ್ಭುತ ಕಾಲ್ಪನಿಕ ಜಿಗಿತಗಳು ಸಾಧ್ಯ. 'ಒಳ್ಳೆಯ ಕವಿ ಮಾತ್ರ ಒಳ್ಳೆಯ ಗೀತೆಯನ್ನು ಬರೆಯಬಲ್ಲ' ಎಂದು ಕೆ.ಎಸ್.ನ. ಹೇಳುತ್ತಿದ್ದರು. 'ಒಳ್ಳೆಯ ಕವಿ ಮಾತ್ರ ಒಳ್ಳೆಯ ಮಕ್ಕಳ ಕವಿತೆ ಬರೆಯಬಲ್ಲ' ಎಂದು ನಾವು ಆ ಸೂಕ್ತಿಯನ್ನು ವಿಸ್ತರಿಸಿದರೆ ತಪ್ಪಾಗಲಿಕ್ಕಿಲ್ಲ.

## ಗಡಿಯಾರ: ದಿನಕರ ದೇಸಾಯಿ

ಗಂಟೆಯ ನೆಂಟನೆ ಓ ಗಡಿಯಾರ
ಬೆಳ್ಳಿಯ ಬಣ್ಣದ ಗೋಳಾಕಾರ
ವೇಳೆಯ ತಿಳಿಯಲು ನೀನಾಧಾರ
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಹಗಲೂ ಇರುಳೂ ಒಂದೇ ಬಾಳು
ನೀನಾವಾಗಲು ದುಡಿಯುವ ಆಳು
ಕಿವಿಯನು ಹಿಂಡಲು ನಿನಗದು ಕೂಳು
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಮುಖ ಒಂದಾದರು ದ್ವಾದಶ ನೇತ್ರ!
ಎರಡೇ ಕೈಗಳು ಏನು ವಿಚಿತ್ರ!
ಯಂತ್ರ ಪುರಾಣದ ರಕ್ಕಸ ಪುತ್ರ!
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಟಿಕ್ ಟಿಕ್ ಎನ್ನುತ ಹೇಳುವೆಯೇನು?
ನಿನ್ನೀ ಮಾತಿನ ಒಳಗುಟ್ಟೇನು?

